ದಿವಾಳೀಯಾದ ಡಿಕ್ರೀ ದೇಣೇದಾರ ಮುದರೆಂಗನ ವಿಷಯದಲ್ಲಿ—

ಸ್ ಈ 1884ನೇ ಇಸವಿ ದಿವಾಳಿ ಕೇಸ್ ನಂಬರು 172

ಹುಕ್ಕುಂ.

ಮೇಲ್ಕಂಡ ಮುದರೆಂಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಬೆಂಗಳೂರು ಸಬ್ ಜಡ್ಜ್ ಸಿ. ಕೈಸ್ ಎಸ್‌ಕ್ವಯರವರ ರೂಬರೂ ಅರ್ಜೀದಾರನಾವ ಮುದರೆಂಗ ಮತ್ತು ಸದರೀಯವನ ಲೇಣೆದಾರ್‌ರಾವ ಮೇಲ್ಕಂಡವರಿಗೆ ವಾರಂಟುದಾರ ಕೃಷ್ಣ ರಾವ್ ಇವರ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—ಪಕ್ಕಲಿಗರ ಗಂಗ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮುದರೆಂಗನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ನಿರ್ಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತುರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿರ್ಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಈ 1884ನೇ ಇಸವಿ ಅಕ್ಟೋಬರ್ 3ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಲೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯುವಂದ ಅವರುಗಳ ವಾಸಸ್ಥಳ.	ಜೊಕುಲಗನ್ನು.			ಯಾವಾಗ ಕೆಟ್ಟಿ ನೋಟಿಸುದರು.	ದೇಣಿಯ ಸ್ವರೂಪ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಪಕ್ಕಲಿಗರ ಗಂಗಣ್ಣಿಗೆ ಕೂಡತಕ್ಕದ್ದು.	11	0	0	0	ಕೈಕಜದ ಬಾಬತು.	
2	ಕೃಷ್ಣರಾವ್‌ಗೆ ಕೊಡತಕ್ಕದ್ದು.	55	9	8	0	ತುಮಕೂರ ಮುನಸಿಫ್ ಕೋರ್ಟು 1884ನೇ ಇಸವಿ ಜಾರಿ 287ನೇ ನಂ. ವಾರಂಟ್ ಬಾಬತು.	

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಬಳೇಪೇಟೆಯಲ್ಲಿರುವ ಪಟಸಾಲೆ ಮುಕುಂದಯ್ಯನ ಕುಮಾರ ಕೃಷ್ಣಪ್ಪನ ವಿಷಯದಲ್ಲಿ—

1884ನೇ ಇಸವಿ ದಿವಾಳೀ ಕೇಸ್ ನಂಬರ್ 239.

ಹುಕ್ಕುಂ.

ಮೇಲ್ಕಂಡ ಕೃಷ್ಣಪ್ಪನು ನಿರ್ಬಂಧದಿಂದ ಖುಲಾಸೀಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಬೆಂಗಳೂರು ಸಬ್ ಜಡ್ಜ್ ಸಿ. ಕೈಸ್ ಯಸ್‌ಕ್ವಯರ್ ಯವರ ರೂಬರೂ ಅರ್ಜೀದಾರನಾವ ಕೃಷ್ಣಪ್ಪ ಮತ್ತು ಸದರೀಯವನ ಲೇಣೇದಾರ್‌ರಾವ ಬೆಂಗಳೂರು ಮುನಸಿಪ್ಪಲ್ ಬ್ಯಾಂಕ್ ಇವರ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ದೂನಿ ನಂಜುಂಡಪ್ಪ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಪಟಸಾಲೆ ಕೃಷ್ಣಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳೀಯಾವವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತ್ತುರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿರ್ಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಈ 1884ನೇ ಇಸವಿ ನವೆಂಬರ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂದ ಕೊಡಲ್ಪಟ್ಟಿತು.

ಸುಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ದಾವೀ ತಿಳಿಯಬೇಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಸಲ್ಲಿಸುವುದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
		ರೂ.			
1	ಅರಳೆದೀಪೆ ನಂಜುಂಡಪ್ಪಗೆ ಕೊಡಬೇಕ್ಕದ್ದು	100		ತಮಸೂಕು ಬಗೆ	
2	ಬೆಂಗಳೂರು ಮಹರಾಷ್ಟ್ರ ಬ್ಯಾಂಕಿಗೆ	20		ಡಿಕರಿ ಮೊಬಲಗು	
	ಜುಮ್ಲೆ	120			

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನ ಕ್ರಿಮಿನಲ್ ಸೆಷನ್ಸಗಳು 1885ನೇ ಇಸವಿಯ ಇದರಡಿ ಕಂಡ ತಾರೀಖುಗಳಲ್ಲಿ ಮೈಸೂರಲ್ಲಿ ನಡೆಯುವವು :—

ಜನವರಿ	14ನೇ ಬುಧವಾರ	ಆಗಸ್ಟು	10ನೇ ಸೋಮವಾರ
ಫೆಬ್ರವರಿ	9ನೇ ಸೋಮವಾರ	ಸೆಪ್ಟಂಬರ್	14ನೇ ಡಿಟೋ
ಮಾರ್ಚಿ	9ನೇ ಡಿಟೋ	ಅಕ್ಟೋಬರ್	12ನೇ ಡಿಟೋ
ಮೇ	26ನೇ ಮಂಗಳವಾರ	ನವಂಬರ್	10ನೇ ಮಂಗಳವಾರ
ಜೂನ್	8ನೇ ಸೋಮವಾರ	ಡಿಸಂಬರ್	7ನೇ ಸೋಮವಾರ
ಜುಲೈ	13ನೇ ಡಿಟೋ		

ಸೆಷನ್ಸಗೆ ಕಮ್ಮಿಟ್ ಮಾಡಲು ಅಧಿಕಾರ ಹೊಂದಿರುವ ಮೈಸೂರು ಡಿಸ್ಟ್ರಿಕ್ಟಿನೊಳಗಣ ಮಾಜಿಸ್ಟ್ರೇಟರುಗಳು, ತಾವು ಕಮ್ಮಿಟ್ ಮಾಡುವ ಮೊಕದ್ದಮೆಗಳಲ್ಲಿ ಕಕ್ಷಿಗಾರರನ್ನೂ, ಸಾಕ್ಷಿಗಳನ್ನೂ ಮೇಲೆ ಕಂಡ ತಾರೀಖುಗಳಲ್ಲಿ ಮೈಸೂರಿನಲ್ಲಿ ಸೆಷನ್ ಕೋರ್ಟು ರೂಬರೂ ಹಾಜರಾಗುವ ಬಗ್ಗೆ ಮುಚ್ಚಲಿಕೆ ತೆಗೆದುಕೊಳ್ಳತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

2. ಮೇಲ್ಕಂಡ ತಾರೀಖುಗಳಲ್ಲಿ ಮಾಮೂಲ್ ಮೇರೆಗೆ ಪೋಲೀಸ್ ವಿಚಾರ್ಸ ಮಾಡುವಂತೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ಕೋರ್ಟು ರೆಪ್ಪಟ್ಟಿರುತ್ತಾರೆ.

ವಿ. ಯ್ಯರ್. ನರಸಿಂಹಯ್ಯಂಗಾರ್,
ಸೆಷನ್ಸ ಜಡ್ಜ್.

ನಂ. 11. ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡೆಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದೆ ಮುತಾಲೀಕಯಾ ಹಕ್ಕುದಾರರೇ ಆಗಲಿ ಈ ನೋಟಿಸ್ ತಾರೀಖು ಲಾಗಾಯತು 1 ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ರ ರೂಬರೂ ಹಾಜರಾಗಿ ಅವುಗಳನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.